## ಕರ್ನಾಟಕ ಸರ್ಕಾರದ ನಡವಳಿಗಳು.

ವಿಷಯ:- ಹಾಸನ ಜಿಲ್ಲಾ ಪಂಚಾಯತಿ ವ್ಯಾಪ್ತಿಯ ಅಕ್ಕಿ ಹಗರಣದಲ್ಲಿ ಭಾಗಿಯಾಗಿರುವ ಅಧಿಕಾರಿಗಳ ವಿರುದ್ಧದ ಶಿಸ್ತುಕ್ರಮ-ಅಂತಿಮ ಆದೇಶದ ಬಗ್ಗೆ.

ಓದಲಾಗಿದೆ:
1) ಪೋಲಿಸ್ ಮಹಾ ನಿರ್ದೇಶಕರು, ಸಿ.ಓ.ಡಿ. ತರಬೇತಿ, ವಿಶೇಷ ಘಟಕಗಳು ಮತ್ತು ಆರ್ಥಿಕ ಅಪರಾದ, ಬೆಂಗಳೂರು ಇವರ ಪತ್ರ ಸಂಖ್ಯೆ: 7,8,9,10/ಅಪರಾಧ/ಎಫ್ಎಸ್/ಸಿಓಡಿ/2004 ದಿನಾಂಕ: 11-01-2007.
2) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಜಿಲ್ಲಾ ಪಂಚಾಯತಿ, ಹಾಸನ ಇವರ ಪತ್ರ ದಿನಾಂಕ:
3) ಕಾರಣ ಕೇಳುವ ನೋಟೀಸ್ ಸಂಖ್ಯೆ: ಗ್ರಾಅಪ 27 ಇಎಸ್‌ಕ್ಯೂ 2004 ದಿನಾಂಕ: 26-11-2014.
4) ಆಪಾದಿತರು ಸಲ್ಲಿಸಿರುವ ಲಿಖಿತ ಹೇಳಿಕೆಗಳು

**ಪ್ರಸ್ತಾವನೆ:-**

ಹಾಸನ ಜಿಲ್ಲಾ ಪಂಚಾಯತ್ ವ್ಯಾಪ್ತಿಯ ಪಂಚಾಯತ್ ರಾಜ್ ಇಂಜನಿಯರಿಂಗ್ ಉಪವಿಭಾಗ ಜಲಾನಯನ ಇಲಾಖೆ, ಮತ್ತು ತಾಲ್ಲೂಕು ಪಂಚಾಯತಿಗಳಲ್ಲಿ ನಡೆದಿರುವ ಅಕ್ಕಿ ಹಗರಣದ ಬಗ್ಗೆ ಸಿ.ಓ.ಡಿ. ಪೋಲಿಸರು ತನಿಖೆ ಕೈಗೊಂಡು ಸಕ್ಷಮ ನ್ಯಾಯಾಲಯಕ್ಕೆ ವರದಿ ಸಲ್ಲಿಸುವ ಸಂದರ್ಭದಲ್ಲಿ ರಫ್ತುದಾರರು, ಗುರುಬಿನ್ನಿ ರೈಸ್ ಮಿಲ್ ಮಾಲೀಕರು, ಹಾಸನ ಮತ್ತು ಅನುಷ್ಠಾನದ ಅಧಿಕಾರಿಗಳ ವಿರುದ್ಧ ಯಾವುದೇ ಆರೋಪ ದೃಢಪಟ್ಟಿರುವುದಿಲ್ಲವೆಂದು "ಬಿ" ವರದಿಯನ್ನು ಸಲ್ಲಿಸಿದ್ದು ಸದರಿ "ಬಿ" ವರದಿಯನ್ನು ನ್ಯಾಯಾಲಯವು ಅಂಗೀಕರಿಸಿರುತ್ತದೆ. ಮುಂದುವರೆದು ಸದರಿ ಸಿ.ಓ.ಡಿ. ತನಿಖಾ ವರದಿಯಲ್ಲಿ ಈ ಕೆಳಗೆ ಕಾಣಿಸಿದ ಅನುಷ್ಠಾನಾಧಿಕಾರಿಗಳು ಕೇಂದ್ರ ಸರ್ಕಾರದ ಕೂಲಿಗಾಗಿ ಕಾಳು ಯೋಜನೆಯಡಿಯಲ್ಲಿ ನಿರ್ವಹಿಸುವಾಗ ಅಕ್ಕಿಯನ್ನು ಕೂಲಿ ಆಳುಗಳಿಗೆ ಕೊಡುವಲ್ಲಿ ನಿರ್ಲಕ್ಷತೆ ತೋರಿದ್ದು, ನಾಮಿನಲ್ ರೋಲ್ (ಎನ್.ಎಂ.ಆರ್.) ತಯಾರು ಮಾಡಿ ಜಿಲ್ಲಾಧಿಕಾರಿಯವರಿಗೆ ಕಳುಹಿಸುವಲ್ಲಿ ಯೋಜನೆಯಂತೆ ತಯಾರು ಮಾಡಿ ಕಳುಹಿಸದೇ ಇರುವುದರಿಂದ ಈ ಕೆಳಕಂಡ ಅಧಿಕಾರಿ/ನೌಕರರ ಮೇಲೆ ಇಲಾಖಾ ವಿಚಾರಣೆಯನ್ನು ನಡೆಸಲು ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ದಿನಾಂಕ: 11-01-2007 ರ ಪತ್ರದಲ್ಲಿ ಪೋಲಿಸ್ ಮಹಾ ನಿರ್ದೇಶಕರು, ಸಿ.ಓ.ಡಿ. ತರಬೇತಿ, ವಿಶೇಷ ಘಟಕಗಳು ಮತ್ತು ಆರ್ಥಿಕ ಅಪರಾದ, ಬೆಂಗಳೂರು ಇವರು ಕೋರಿರುತ್ತಾರೆ.

**ಶ್ರೀಯುತರು**

1. ರಾಮೇಗೌಡ, ಹಿಂದಿನ ಕಿರಿಯ ಸಹಾಯಕ, ಕೆಎಫ್ ಸಿ ಎಸ್ ಸಿ ಹಾಸನ
2. ಬಿ.ಆರ್. ಪ್ರಕಾಶ್, ಹಿಂದಿನ ಕಿರಿಯ ಸಹಾಯಕ, ಕೆಎಫ್‌ಸಿಎಸ್‌ಸಿ ಅರಸೀಕೆರೆ
3. ಹೆಚ್.ಎಸ್. ಜಗದೀಶ್, ಹಿಂದಿನ ಕಿರಿಯ ಸಹಾಯಕ, ಕೆಎಫ್‌ಸಿಎಸ್‌ಸಿ, ಸಕಲೇಶಪುರ
4. ಸಾಂಬಶಿವಯ್ಯ , ಹಿಂದಿನ ಹಿರಿಯ ಸಹಾಯಕ, ಕೆಎಫ್‌ಸಿಎಸ್‌ಸಿ, ಸಕಲೇಶಪುರ
5. ರಮೇಶ್, ಹಿಂದಿನ ಹಿರಿಯ ಸಹಾಯಕ, ಕೆಎಫ್‌ಸಿಎಸ್‌ಸಿ ಆಲೂರು.
6. ವೆಂಕಟಸ್ವಾಮಿ ಹಿಂದಿನ ಹಿರಿಯ ಸಹಾಯಕ, ಕೆಎಫ್‌ಸಿಎಸ್‌ಸಿ ಅರಕಲಗೂಡು
7. ಟಿ. ಕಾಳೇಗೌಡ, ಹಿಂದಿನ ಹಿರಿಯ ಸಹಾಯಕ, ಕೆಎಫ್‌ಸಿಎಸ್‌ಸಿ ಅರಸೀಕೆರೆ
8. ಎ. ಎಸ್. ಕುಮಾರ್, ಹಿಂದಿನ ಕಿರಿಯ ಸಹಾಯಕ, ಕೆಎಫ್‌ಸಿಎಸ್‌ಸಿ ಹಾಸನ
9. ಹೆಚ್.ಪಿ. ಚಿನ್ನರಾಜು, ಹಿಂದಿನ ಜಿಲ್ಲಾ ವ್ಯವಸ್ಥಾಪಕರು, ಕೆಎಫ್‌ಸಿಎಸ್‌ಸಿ ಹಾಸನ

10. ರಾಜಗೋಪಾಲ್, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ ತಾ.ಪಂ., ಸಕಲೇಶಪುರ.
11. ಲಕ್ಷ್ಮೀಕಾಂತ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ ತಾ.ಪಂ., ಹೊಳೇನರಸೀಪುರ
12. ಎಸ್.ಸತೀಶಚಂದ್ರ ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ ತಾಪಂ.ಅರಕಲಗೂಡು
13. ಎಸ್. ಸಿ. ಮಹೇಶ್, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ ತಾಪಂ., ಚನ್ನರಾಯಪಟ್ಟಣ
14. ಪ್ರಭಾಕರ ಗುಪ್ತ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ ತಾಪಂ., ಆಲೂರು
15. ವೆಂಕಟೇಶ ಜಿ.ಟಿ. ಹಿಂದಿನ ಸಕಾಇಂ, ಬೇಲೂರು
16. ಕೆ. ಬಿ. ಸುಬ್ರಹ್ಮಣ್ಯ ಹಿಂದಿನ ಸಕಾಇಂ., ಸಕಲೇಶಪುರ
17. ಹೆಚ್. ಬಿ. ಅಶೋಕಕುಮಾರ್. ಹಿಂದಿನ ಕೃಷಿ ಅಧಿಕಾರಿ, ಆಲೂರು
18. ಕೆ. ಎಂ. ಶೇಷಣ್ಣ, ಹಿಂದಿನ ಕೃಷಿ ಅಧಿಕಾರಿ, ಚನ್ನರಾಯಪಟ್ಟಣ
19. ಕೆ. ಆರ್. ಮಲ್ಲೇಶಗೌಡ, ಹಿಂದಿನ ಕೃಷಿ ಅಧಿಕಾರಿ, ಹೊಳೆನರಸೀಪುರ
20. ಡಿ. ಎನ್. ವಿಶ್ವನಾಥ್, ಹಿಂದಿನ ಕೃಷಿ ಅಧಿಕಾರಿ, ಆಲೂರು
21. ಜಿ. ಸಿ. ರಾಮಣ್ಣ, ಹಿಂದಿನ ಸಹಾಯಕ ಕಾರ್ಯಪಾಲಕ ಇಂಜೀನಿಯರ್, ಜಿಲ್ಲಾ ಪಂಚಾಯಿತಿ ಇಂಜೀನಿಯರ್ ವಿಭಾಗ, ಆಲೂರು
22. ಎ. ಎನ್. ಚಂದ್ರಶೇಖರ್, ಹಿಂದಿನ ಸಹಾಯಕ ಕಾರ್ಯಪಾಲಕ ಇಂಜೀನಿಯರ್, ಜಿಲ್ಲಾ ಪಂಚಾಯತಿ ಇಂಜೀನಿಯರ್ ವಿಭಾಗ,ಅರಸೀಕರೆ
23. ಶಿವಾನಂದ, ಹಿಂದಿನ ಸಹಾಯಕ ಕಾರ್ಯಪಾಲಕ ಇಂಜೀನಿಯರ್, ಜಿಲ್ಲಾ ಪಂಚಾಯತಿ ಇಂಜೀನಿಯರ್ ವಿಭಾಗ, ಹೊಳೆನರಸೀಪುರ
24. ಕೆ. ಕೃಷ್ಣಪ್ಪ , ಹಿಂದಿನ ಸಹಾಯಕ ಕಾರ್ಯಪಾಲಕ ಇಂಜೀನಿಯರ್, ಜಿಲ್ಲಾ ಪಂಚಾಯತಿ ಇಂಜೀನಿಯರ್ ವಿಭಾಗ,. ಚನ್ನರಾಯಪಟ್ಟಣ
25. ಕೆ. ಅಣ್ಣೇಗೌಡ, ಹಿಂದಿನ ಸಹಾಯಕ ಕಾರ್ಯಪಾಲಕ ಇಂಜೀನಿಯರ್, ಜಿಲ್ಲಾ ಪಂಚಾಯತಿ ಇಂಜೀನಿಯರ್ ವಿಭಾಗ,. ಅರಕಲಗೂಡು
26. ನಂಜಪ್ಪಗೌಡ ಹಿಂದಿನ ಸಹಾಯಕ ಕಾರ್ಯಪಾಲಕ ಇಂಜೀನಿಯರ್, ಸಣ್ಣ ನೀರಾವರಿ ಉಪ ವಿಭಾಗ ಹಾಸನ
27. ನಾಗರಾಜ ಜಿ. ನಾಯಕ್, ಹಿಂದಿನ ಎಸಿಎಫ್ ಜಲಾನಯನ ಇಲಾಖೆ ಹಾಸನ
28. ಟಿ. ಕೃಷ್ಣಕುಮಾರ್, ಹಿಂದಿನ ಕೃಷಿ ಅಧಿಕಾರಿ, ಅರಕಲಗೂಡು
29. ಟಿ. ಚನ್ನೇಗೌಡ, ಹಿಂದಿನ ಕೃಷಿ ಅಧಿಕಾರಿ, ಜಲಾನಯನ ವಿಭಾಗ, ಹಾಸನ
30. ಬಸವರಾಜು, ಹಿಂದಿನ ವ್ಯವಸ್ಥಾಪಕರು, ಕೆ ಎಫ್ ಎಸ್ ಸಿ ಚನ್ನರಾಯಪಟ್ಟಣ
31. ನಂಜೇಶಯ್ಯ, ಹಿಂದಿನ ಸಹಾಯಕ ಕಾರ್ಯಪಾಲಕ ಇಂಜೀನಿಯರ್, ಜಿಲ್ಲಾ ಪಂಚಾಯತಿ, ಹಾಸನ
32. ಹನುಮನರಸಯ್ಯ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ ತಾಪಂ., ಹಾಸನ
33. ಜೈಕುಮಾರ್, ಹಿಂದಿನ ವ್ಯವಸ್ಥಾಪಕರು, ಕೆ ಎಫ್ ಎಸ್ ಸಿ, ಆಲೂರು.

ಸದರಿ ಪ್ರಕರಣದಲ್ಲಿ ಆಹಾರ ಮತ್ತು ನಾಗರೀಕ ಸರಬರಾಜು ನಿಗಮದ 11 ಅಧಿಕಾರಿ/ನೌಕರರು ಒಳಗೊಂಡಿರುವ ಕಾರಣ ನಿಯಮಾನುಸಾರ ಶಿಸ್ತು ಕ್ರಮ ಜರುಗಿಸಲು ದಿನಾಂಕ:24-1-2013 ರ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಆಹಾರ ಮತ್ತು ನಾಗರಿಕ ಸರಬರಾಜು ನಿಗಮ ಬೆಂಗಳೂರು ಇವರನ್ನು ಕೋರಲಾಗಿದೆ.

ಸದರಿ ಪ್ರಕರಣದಲ್ಲಿ ಭಾಗಿಯಾಗಿದ್ದ ಈ ಕೆಳಕಂಡ ಅಧಿಕಾರಿಗಳು ಈಗಾಗಲೇ ನಿವೃತ್ತರಾಗಿದ್ದು, ಘಟನೆ ನಡೆದು 4 ವರ್ಷಗಳ ಅವಧಿ ಕಳೆದಿರುವುದರಿಂದ ಅವರ ವಿರುದ್ಧ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿ ನಿಯಮ-214ರ ಅನುಸಾರ ಇಲಾಖಾ ವಿಚಾರಣೆ ನಡೆಸಲು ಅವಕಾಶವಿಲ್ಲದ ಕಾರಣ ಅವರ ವಿರುದ್ಧ ಯಾವುದೇ ಶಿಸ್ತು ಕ್ರಮ ಜರುಗಿಸಿರುವುದಿಲ್ಲ. ಪ್ರಕರಣದಲ್ಲಿ ಯಾವುದೇ ಆರ್ಥಿಕ ನಷ್ಟದ ಪ್ರಸ್ತಾವನೆ ಇಲ್ಲದ ಕಾರಣ ಇವರುಗಳ ವಿರುದ್ಧದ ಶಿಸ್ತು ಕ್ರಮವನ್ನು ಕೈಬಿಡಲಾಗಿದೆ.

ಶ್ರೀಯುತರು,

1. ಲಕ್ಷ್ಮೀಕಾಂತ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ ತಾ.ಪಂ ಹೊಳೇನರಸೀಪುರ.
2. ಎಸ್.ಸತೀಶಚಂದ್ರ ಕಾರ್ಯನಿರ್ವಾಹಕ ಅಧಿಕಾರಿ ತಾಪಂ.ಅರಕಲಗೂಡು
3. ಪ್ರಭಾಕರ ಗುಪ್ತ, ಕಾರ್ಯನಿರ್ವಾಹಕ ಅಧಿಕಾರಿ ತಾಪಂ., ಆಲೂರು
4. ಕೆ. ಎಂ. ಶೇಷಣ್ಣ, ಕೃಷಿ ಅಧಿಕಾರಿ, ಚನ್ನರಾಯಪಟ್ಟಣ
5. ಡಿ. ಎನ್. ವಿಶ್ವನಾಥ್, ಕೃಷಿ ಅಧಿಕಾರಿ, ಆಲೂರು
6. ಕೆ. ಅಣ್ಣೇಗೌಡ, ಸಕಾಇಂ. ಅರಕಲಗೂಡು
7. ಟಿ. ಕೃಷ್ಣಕುಮಾರ್, ಹಿಂದಿನ ಕೃಷಿ ಅಧಿಕಾರಿ, ಅರಕಲಗೂಡು
8. ಜಿ. ಸಿ. ರಾಮಣ್ಣ, ಹಿಂದಿನ ಸಕಾಇಂ ಅರಕಲಗೂಡು ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ.

ಸದರಿ ಪ್ರಕರಣದಲ್ಲಿ ಭಾಗಿಯಾಗಿರುವ ಶ್ರೀ. ನಂಜಪ್ಪಗೌಡ ಹಿಂದಿನ ಸಹಾಯಕ ಕಾರ್ಯಪಾಲಕ ಇಂಜೀನಿಯರ್., ಸಣ್ಣ ನೀರಾವರಿ ಉಪ ವಿಭಾಗ ಹಾಸನ ಮತ್ತು ಶ್ರೀ. ಎ. ಎನ್. ಚಂದ್ರಶೇಖರ್, ಹಿಂದಿನ ಸಹಾಯಕ ಕಾರ್ಯಪಾಲಕ ಇಂಜೀನಿಯರ್. ಅರಸೀಕರೆ ಇವರುಗಳು ಮರಣ ಹೊಂದಿರುವುದರಿಂದ ಸದರಿ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಜರುಗಿಸಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲವಾದ್ದರಿಂದ ಇವರುಗಳ ವಿರುದ್ಧದ ಶಿಸ್ತು ಕ್ರಮವನ್ನು ಕೈಬಿಡಲಾಗಿದೆ

ಇನ್ನುಳಿದ 12 ಅಧಿಕಾರಿಗಳು ಸೇರಿದಂತೆ, ಶ್ರೀ ನಾಗರಾಜ್ ಹಿಂದಿನ ಸಕಾಇಂ ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಸಕಲೇಶಪುರ ಇವರುಗಳ ವಿರುದ್ಧ ಶಿಸ್ತುಕ್ರಮ ಜರುಗಿಸಲು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ ಹಾಸನ, ರವರು ಮೇಲೆ ಓದಲಾದ ಕ್ರಮ ಸಂಖ್ಯೆ(2)ರಲ್ಲಿ ದೋಷಾರೋಪಣಾ ಪಟ್ಟಿಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿ, ಮೇಲೆ ಓದಲಾದ ಕ್ರಮ ಸಂಖ್ಯೆ(3)ರ ದಿನಾಂಕ: 26-11-2014 ರಲ್ಲಿ ಈ ಕೆಳಕಂಡ ಅಧಿಕಾರಿಗಳಿಗೆ ಕರ್ನಾಟಕ ನಾಗರಿಕ ಸೇವಾ(ವ.ನಿ.ಮೇ) 1957ರ ನಿಯಮ 12 (1)(ಎ)ರಡಿಯಲ್ಲಿ ದಿನಾಂಕ:20-12-2014 ರಂದು ಕಾರಣ ಕೇಳುವ ನೋಟೀಸ್‌ನೊಂದಿಗೆ ದೋಷಾರೋಪಣೆಪಟ್ಟಿಯನ್ನು ಜಾರಿ ಮಾಡಲಾಗಿತ್ತು.

| ಕ್ರ.ಸಂ. | ಅಧಿಕಾರಗಳ ಹೆಸರು ಮತ್ತು ಹುದ್ದೆ<br>ಶ್ರೀ/ಶ್ರೀಮತಿ |
|---|---|
| 1 | ಹೆಚ್. ಪಿ. ನಂಜೇಶಯ್ಯ, ಹಿಂದಿನ ಸಕಾಇಂ., ಹಾಸನ ಪಂ. ರಾಜ್.ಇಂ. ಉಪ ವಿಭಾಗ |
| 2 | ಟಿ. ಚನ್ನಕೇಶವ, ಹಿಂದಿನ ಕೃಷಿ ಅಧಿಕಾರಿ, ಜಲಾನಯನ ವಿಭಾಗ, ಹಾಸನ |
| 3 | ನಾಗರಾಜ ಜಿ. ನಾಯಕ್, ಹಿಂದಿನ ಎಸಿಎಫ್ ಜಲಾನಯನ ಇಲಾಖೆ ಹಾಸನ |
| 4 | ಹನುಮನರಸಯ್ಯ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ ತಾಪಂ., ಹಾಸನ |
| 5 | ಹೆಚ್. ಬಿ. ಅಶೋಕಕುಮಾರ್, ಹಿಂದಿನ ಕೃಷಿ ಅಧಿಕಾರಿ, ಆಲೂರು |
| 6 | ಕೆ. ಆರ್. ಮಲ್ಲೇಶಗೌಡ, ಹಿಂದಿನ ಕೃಷಿ ಅಧಿಕಾರಿ, ಹೊಳೆನರಸೀಪುರ |
| 7 | ಕೆ. ಬಿ. ಸುಬ್ರಹ್ಮಣ್ಯ ಹಿಂದಿನ ಸಕಾಇಂ., ಸಕಲೇಶಪುರಪಂ. ರಾಜ್.ಇಂ. ಉಪ ವಿಭಾಗ.ಸಕಲೇಶಪುರ. |
| 8 | ರಾಜಗೋಪಾಲ್, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ ತಾ.ಪಂ., ಸಕಲೇಶಪುರ |
| 9 | ಎಸ್. ಸಿ. ಮಹೇಶ್, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ |

GO

| | |
|---|---|
| | ತಾಪಂ.ಚನ್ನರಾಯಪಟ್ಟಣ |
| 10 | ಬಿ. ಎ. ಶಿವಾನಂದ, ಹಿಂದಿನ ಸಕಾಇಂ. ಹೊಳೆನರಸೀಪುರ ಪಂ. ರಾಜ್.ಇಂ. ಉಪ ವಿಭಾಗ.ಹೊಳೆನರಸೀಪುರ. |
| 11 | ಕೆ. ಕೃಷ್ಣಪ್ಪ , ಹಿಂದಿನ ಸಕಾಇಂ. ಚನ್ನರಾಯಪಟ್ಟಣ ಪಂ. ರಾಜ್.ಇಂ. ಉಪ ವಿಭಾಗ.ಚನ್ನರಾಯಪಟ್ಟಣ. |
| 12 | ವೆಂಕಟೇಶ ಜಿ.ಟಿ. ಹಿಂದಿನ ಸಕಾಇಂ, ಬೇಲೂರು ಪಂ. ರಾಜ್.ಇಂ. ಉಪ ವಿಭಾಗ. ಬೇಲೂರು. |
| 13 | ಆರ್. ನಾಗರಾಜ್, ಹಿಂದಿನ ಕಾನಿಇಂ ಪಂ. ತಾಂತ್ರಿಕ ವಿಭಾಗ. ಹಾಸನ |

ಪ್ರಕರಣದಲ್ಲಿ ಭಾಗಿಯಾಗಿರುವ ಎಲ್ಲಾ ಆಪಾದಿತರುಗಳ ವಿರುದ್ಧ ಮಾಡಲಾಗಿರುವ ಆರೋಪವು ಒಂದೇ ರೀತಿಯದ್ದಾಗಿರುತ್ತದೆ. ಅದೇನೆಂದರೆ, ಆಪಾದಿತರುಗಳು ಹಾಸನ ಜಿಲ್ಲೆಯಲ್ಲಿ ಕೆಲಸನಿರ್ವಹಿಸುತ್ತಿದ್ದಾಗ ಅನುಷ್ಠಾನಗೊಳಿಸಲಾಗಿರುವ ಕಾಮಗಾರಿಗಳಲ್ಲಿ ಕೆಲಸ ನಿರ್ವಹಿಸಿದ ಕೂಲಿ ಕಾರ್ಮಿಕರಿಗೆ ಅಕ್ಕಿ ಮತ್ತು ಕೂಲಿ ಹಣವನ್ನು ಪಾವತಿಸಿರುವುದರ ಬಗ್ಗೆ ನಿಯಮಾನುಸಾರ ಎನ್.ಎಂ.ಆರ್.ಗಳನ್ನು ನಿರ್ವಹಿಸದೆ ತಮ್ಮ ಕರ್ತವ್ಯದಲ್ಲಿ ನಿಷ್ಕಾಳಜಿ ತೋರಿ ಕರ್ತವ್ಯಲೋಪವೆಸಗಿರುವ ಬಗ್ಗೆ ಆರೋಪಿಸಲಾಗಿದೆ. ಆರೋಪಕ್ಕೆ ಪ್ರತಿಯಾಗಿ ಆಪಾದಿತರುಗಳು ಸಲ್ಲಿಸಿರುವ ಲಿಖಿತ ಹೇಳಿಕೆಗಳನ್ನು ಪರಿಶೀಲಿಸಲಾಗಿದ್ದು, ಸದರಿಯವರ ಸಲ್ಲಿಸಿರುವ ವಿವರಣೆಗಳು ಈ ಕೆಳಕಂಡಂತಿರುತ್ತವೆ:-

1) ಶ್ರೀ. ನಾಗರಾಜ್ ಜಿ. ನಾಯಕ್, ಹಿಂದಿನ ಎ.ಸಿ.ಎಫ್., ಜಿಲ್ಲೆ, ಹಾಸನ ತಮಗೆ ಹಾಸನ ಜಿಲ್ಲಾಧಿಕಾರಿಗಳು ಹಂಚಿಕೆ ಮಾಡಿದ 928 ಮೆಟ್ರಿಕ್ ಟನ್ ಅಕ್ಕಿಯನ್ನು ತಾವು ತಮ್ಮ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿದ್ದ ವಲಯ ಅರಣ್ಯ ಸಂರಕ್ಷಣಾಧಿಕಾರಿ ರವರ ಮುಖೇನ ಸಂಬಂಧಪಟ್ಟ ತಾಲ್ಲೂಕುಗಳಿಗೆ ಹಂಚಿಕೆ ಮಾಡಿದ್ದು, ಈ ಬಗ್ಗೆ ನಿರ್ವಹಿಸಲಾದ ದಾಖಲೆಯ ಪ್ರತಿಯನ್ನು ಸಹ ತಮ್ಮ ವಿವರಣೆಯ ಜೊತೆ ಲಗತ್ತಿಸಿದ್ದು, ತಾವು ಜಿಲ್ಲಾಧಿಕಾರಿಯವರು ತಮಗೆ ಹಂಚಿಕೆ ಮಾಡಿರುವುದ್ದರಿಂದ ತಾವು ಯಾವುದೇ ರೀತಿಯಲ್ಲಿ ಕರ್ತವ್ಯಲೋಪ ಎಸಗಿರುವುದಿಲ್ಲವೆಂದು ತಿಳಿಸಿ, ತಮ್ಮ ವಿರುದ್ಧದ ಶಿಸ್ತುಕ್ರಮವನ್ನು ಕೈಬಿಡಬೇಕೆಂದು ಕೋರಿರುತ್ತಾರೆ. ಸದರಿ ಅಧಿಕಾರಿಯ ವಿರುದ್ಧದ ಪುಟ:1298 ರಲ್ಲಿರುವ ಆರೋಪಗಳನ್ನು ಪರಿಶೀಲಿಸಲಾಗಿ, ಸದರಿಯವರು ನಿರ್ದಿಷ್ಟವಾಗಿ ಆಹಾರ ಸಾಮಗ್ರಿಗಳ ವಿತರಣೆಯಲ್ಲಿ ಅಕ್ರಮ ಎಸಗಿರುವ ಬಗ್ಗೆ ಯಾವುದೇ ಆರೋಪ ಇರುವುದಿಲ್ಲ. ಅಲ್ಲದೆ ಪ್ರಕರಣದಲ್ಲಿ ಈಗಾಗಲೆ ಸಿ.ಓ.ಡಿ. ವಿಭಾಗವು ತನಿಖೆ ನಡೆಸಿ ಯಾವುದೇ ಕರ್ತವ್ಯಲೋಪ/ದುರ್ನಡತೆ ಕಂಡುಬಾರದೆ ಇರುವುದರಿಂದ ನ್ಯಾಯಾಲಯದಲ್ಲಿ "ಬಿ" ವರದಿಯನ್ನು ಸಲ್ಲಿಸಿರುವುದರಿಂದ ಹಾಗಾಗಿ ಸದರಿಯವರು ಸಲ್ಲಿಸಿರುವ ವಿವರಣೆಯನ್ನು ಪರಿಗಣಿಸಬಹುದು.

2) ಶ್ರೀ. ರಾಜಗೋಪಾಲ್, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಸಕಲೇಶಪುರ, ಶ್ರೀ. ಹನುಮರಸಯ್ಯ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತ್ ಹಾಸನ ಮತ್ತು ಶ್ರೀ. ಎಸ್. ಸಿ. ಮಹೇಶ್, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಾತ್ ಚನ್ನರಾಯಪಟ್ಟಣ ಈ ಮೂವರು ಅಧಿಕಾರಿಗಳು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯವರಾಗಿದ್ದು, ಹಾಲಿ ಉಪ ಕಾರ್ಯದರ್ಶಿ ವೃಂದದಲ್ಲಿ ಕೆಲಸನಿರ್ವಹಿಸುತ್ತಿದ್ದಾರೆ. ಸದರಿಯವರುಗಳು ಕಾರ್ಯನಿರ್ವಾಹಕ ಅಧಿಕಾರಿಯಾಗಿ ಕೆಲಸ ನಿರ್ವಹಿಸುತ್ತಿದ್ದ ಸಂದರ್ಭದಲ್ಲಿ ಹಲವಾರು ಇಲಾಖೆಗಳ ಮೇಲ್ವಿಚಾರಣೆ ಮಾಡುವುದು, ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ವಿವಿಧ ಕಾಮಗಾರಿಗಳನ್ನು ಅನುಷ್ಠಾನಗೊಳಿಸುವುದು, ಗ್ರಾಮ ಪಂಚಾಯತಿ ಸಭೆಗಳಲ್ಲಿ ಭಾಗವಹಿಸುವುದು ಇತ್ಯಾದಿ ಕೆಲಸಗಳ ನಡುವೆಯೂ ಬರ ಪರಿಹಾರ ಕಾಮಗಾರಿಗಳನ್ನು ನಿಯಮಾನುಸಾರ ಅನುಷ್ಠಾನಗೊಳಿಸಲಾಗಿದ್ದು, ಕಾಮಗಾರಿಗಳು ಪೂರ್ಣಗೊಂಡು ಅವುಗಳಿಗೆ ಬಿಲ್ಲುಗಳನ್ನು ಸಹ ಪಾವತಿಸಲು ಕ್ರಮಬದ್ಧವಾಗಿ ಎನ್.ಎಮ್.ಆರ್.ಗಳನ್ನು ನಿರ್ವಹಿಸಿರುವುದಾಗಿಯೂ, ಯಾವುದೇ ಕಾರ್ಮಿಕರು ತಮಗೆ ಬಿಲ್ ಪಾವತಿಯಾಗಿಲ್ಲವೆಂದು, ಅಥವಾ ಅಕ್ಕಿ ವಿತರಣೆಯಾಗಿದಲ್ಲವೆಂದು ದೂರು ಸಲ್ಲಿಸಿರುವುದಿಲ್ಲವೆಂದು

ತಿಳಿಸುತ್ತಾ ತಮ್ಮನ್ನು ಆರೋಪಮುಕ್ತರನ್ನಾಗಿಸಬೇಕೆಂದು ಕೋರಿರುತ್ತಾರೆ. ಆದರೆ ತಮ್ಮ ಹೇಳಿಕೆಗೆ ಪೂರಕವಾಗಿ ಯಾವುದೇ ದಾಖಲೆಗಳನ್ನು ಸಲ್ಲಿಸಿರುವುದಿಲ್ಲ.

3) ಶ್ರೀ. ಕೆ.ಜಿ. ಸುಬ್ರಮಣ್ಯ, ಹಿಂದಿನ ಕೃಷಿ ಅಧಿಕಾರಿ, ಸಕಲೇಶಪುರ, ಶ್ರೀ. ಹೆಚ್. ಪಿ. ಅಶೋಕ ಕುಮಾರ್, ಹಿಂದಿನ ಕೃಷಿ ಅಧಿಕಾರಿ, ಆಲೂರು ಹಾಗೂ ಶ್ರೀ. ಕೆ. ಆರ್. ಮಲ್ಲೇಶಗೌಡ, ಹಿಂದಿನ ಕೃಷಿ ಅಧಿಕಾರಿ ಚನ್ನರಾಯಪಟ್ಟಣ ಸದರಿಯವರುಗಳು ತಮ್ಮ ಹೇಳಿಕೆಯಲ್ಲಿ ವಾಸ್ತವವಾಗಿ ತಮ್ಮ ಇಲಾಖೆಯಲ್ಲಿ ಜಲ ಸಂಪನ್ಮೂಲ, ಲೋಕೋಪಯೋಗಿ ಇಲಾಖೆಗಳು ನಿರ್ವಹಿಸುವಂತೆ ಎನ್.ಎಂ.ಆರ್.ಗಳನ್ನು ನಿರ್ವಹಿಸುವುದಿಲ್ಲವೆಂದು, ವೈಯಕ್ತಿಕ ಬಟವಾಡೆ ಪಟ್ಟಿಗಳನ್ನು ನಿರ್ವಹಿಸಲಾಗುತ್ತದೆಂದು ಅವುಗಳನ್ನು ಕಾಮಗಾರಿಗಳನ್ನು ನಿರ್ವಹಿಸುವ ಕೃಷಿ ಸಹಾಯಕ/ಸಹಾಯಕ ಕೃಷಿ ಅಧಿಕಾರಿ ಇವರುಗಳು ನಿರ್ವಹಿಸುತ್ತಾರೆಂದು, ತಮ್ಮ ಮೇಲುಸ್ತುವಾರಿ ಅಧಿಕಾರಿಗಳಾದ ಜಿಲ್ಲಾಧಿಕಾರಿಗಳು ಹಂಚಿಕೆ ಮಾಡಿದ ಅಕ್ಕಿಯ ದಾಸ್ತಾನನ್ನು ಸಬಂಧಪಟ್ಟ ಕೃಷಿ ಅಧಿಕಾರಿಯವರಿಗೆ ವರ್ಗಾಯಿಸಿದ್ದು, ತಮ್ಮ ಮೇಲೆ ಅನಾವಶ್ಯಕವಾಗಿ ಆರೋಪವನ್ನು ಮಾಡಲಾಗಿದೆಯೆಂದು, ತಾವು ಯಾವುದೇ ತಪ್ಪು ಮಾಡದೇ ಇರುವುದರಿಂದ ತಮ್ಮನ್ನು ಆರೋಪಮುಕ್ತರನ್ನಾಗಿಸಬೇಕೆಂದು ಕೋರಿರುತ್ತಾರೆ. ಆದರೆ, ಲಿಖಿತ ಹೇಳಿಕೆ ಪೂರಕವಾಗಿ ಯಾವುದೇ ದಾಖಲೆಗಳನ್ನು ಸಲ್ಲಿಸಿರುವುದಿಲ್ಲ.

...

4) ಹಾಸನ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರವರು ದಿ: 17-08-2007 ರಲ್ಲಿ ಸರ್ಕಾರಕ್ಕೆ ಸಲ್ಲಿಸಿರುವ ವರದಿಯಲ್ಲಿ ಶ್ರೀ. ಜಿ. ವಿ. ಶಿವಾನಂದ ಸಹಾಯಕ ಕಾರ್ಯಪಾಲಕ ಇಂಜೀನಿಯರ್ ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಹೊಳೆನರಸೀಪುರ ಮತ್ತು ಶ್ರೀ. ಜಿ. ಟಿ. ವಂಕಟೇಶ, ಸಹಾಯಕ ಕಾರ್ಯಪಾಲಕ ಇಂಜೀನಿಯರ್, ಬೇಲೂರು ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ ಇವರುಗಳು ತಾವು ಕೆಲಸ ನಿರ್ವಹಿಸುತ್ತಿದ್ದ ಸಂದರ್ಭದಲ್ಲಿ ಬರ ಪರಿಹಾರ ಕಾಮಗಾರಿಗಳನ್ನು ಸರ್ಕಾರದ /ಇಲಾಖೆಯ ಮಾರ್ಗಸೂಚಿನೆಗಳನ್ನು ನಿರ್ವಹಿಸುತ್ತಿದ್ದ ಕಾರ್ಯಪಾಲಕ ಇಂಜೀನಿಯರ್ ರವರು ಹಣ ಪಾವತಿಸಿದ್ದು, ತಾವು ಯಾವುದೇ ಕರ್ತವ್ಯಲೋಪವೆಸಗಿರುವುದಿಲ್ಲವೆಂದು ತಿಳಿಸಿರುತ್ತಾರೆ. ಹಾಗೂ ಶ್ರೀ. ಕೆ. ಅಣ್ಣೇಗೌಡ, ಹಿಂದಿನ ಸಹಾಯಕ ಕಾರ್ಯಪಾಲಕ ಇಂಜೀನಿಯರ್ (ಹಾಲಿ ನಿವೃತ್ತ) ಇವರು ತಮ್ಮ ಕೆಲಸದಲ್ಲಿ ನಿಷ್ಕಾಳಜಿ ತೋರಿಸಿಲ್ಲವೆಂದು, ನಿಯಮಾನುಸಾರ ಎನ್.ಎಂ.ಆರ್. ನಿರ್ವಹಿಸಿರುವರೆಂದು, ಸಿ.ಒ.ಡಿ. ವರದಿಯಲ್ಲಿ ಆರೋಪವನ್ನು ಹೊರಿಸಲು ಯಾವುದೇ ಸಾಕ್ಷಿ ಪುರಾವೆಗಳು ಹೊರಬಂದಿರುವುದಿಲ್ಲವೆಂದು, ಆದ್ದರಿಂದ ಅವರ ಮೇಲಿನ ಪ್ರಕರಣವನ್ನು ಮುಕ್ತಾಯಗೊಳಿಸಲು ಕೋರಿರುತ್ತಾರೆ. ಹಾಗಾಗಿ ಅವರುಗಳು ವಿರುದ್ಧದ ಶಿಸ್ತುಕ್ರಮ ಕೈಬಿಡಲು ಪರಿಗಣಿಸಬಹುದು.

5) ಶ್ರೀ. ಹೆಚ್. ವಿ. ನಂಜೇಶಯ್ಯ, ಹಿಂದಿನ ಸಹಾಯಕ ಕಾರ್ಯಪಾಲಕ ಇಂಜೀನಿಯರ್ ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಹಾಸನ ಇವರು ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗದಲ್ಲಿ ಕೆಲಸನಿರ್ವಹಿಸುತ್ತಿದ್ದ ಸಂದರ್ಭದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರದ ವಿವಿಧ ಯೋಜನೆಗಳ ಅನುಷ್ಠಾನದ ಜೊತೆಗೆ ಇತರೆ ಇಲಾಖೆಗಳ ಮೇಲ್ವಿಚಾರಣೆ ನಡೆಸುವುದು, ಸಾಮಾನ್ಯ ಸಭೆಗಳಲ್ಲಿ ಭಾಗವಹಿಸುವುದು ಹಾಗೂ ಇತರೆ ಹಲವಾರು ಸಭೆಗಳಿಗೆ ಹಾಜರಾಗುವುದು ಮತ್ತು ಸಾರ್ವಜನಿಕರ ಕುಂದುಕೊರತೆಗಳಿಗೆ ಸಂಬಂಧಿಸಿದಂತೆ ಅನೇಕ ಕೆಲಸ ಕಾರ್ಯಗಳ ಒತ್ತಡ ಇದ್ದು, ತಾವು ಪ್ರಾಮಾಣಿಕವಾಗಿ ತಮ್ಮ ಕೆಲಸ ಕಾರ್ಯಗಳನ್ನು ನಿರ್ವಹಿಸಿದ್ದು, ಈಗಾಗಲೇ ದಿನಾಂಕ: 31-10-2014 ರಂದು ಸೇವೆಯಿಂದ ನಿವೃತ್ತಿ ಹೊಂದಿರುವುದರಿಂದ ತಮ್ಮನ್ನು ಆರೋಪಮುಕ್ತಗೊಳಿಸಬೇಕೆಂದು ಕೋರಿರುತ್ತಾರೆ. ಸದರಿಯವರ ಲಿಖಿತ ಹೇಳಿಕೆಯನ್ನು ಒಪ್ಪಲಾಗಿದೆ.

6) ಶ್ರೀ. ಕೆ. ಕೃಷ್ಣಪ್ಪ, ಹಿಂದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಬೇಲೂರು ಇವರು ಬರ ಪರಿಹಾರ ಕಾಮಗಾರಿಗಳಿಗೆ ಸಂಬಂಧಿಸಿದ ಕಾಮಗಾರಿಗಳಲ್ಲಿಯೇ ಆಗಲೀ ಅಥವಾ ವಿತರಣೆಯಾಗಿರುವ ಆಹಾರ ಧಾನ್ಯಗಳಲ್ಲಿಯೇ ಆಗಲೀ ಯಾವುದೇ ಲೋಪಗಳು ಆಗಿರುವುದಿಲ್ಲವೆಂದು, ತಾವು ಸಮರ್ಪಕವಾಗಿ ಕೆಲಸನಿರ್ವಹಿಸಿದ್ದು, ಯಾವುದೇ ಅವ್ಯವಹಾರಕ್ಕೆ ಅವಕಾಶ ನೀಡದಂತೆ ಕೆಲಸನಿರ್ವಹಿಸಿರುವುದಾಗಿಯೂ, ಎನ್.ಎಂ.ಆರ್.ಗಳನ್ನು ಸಮರ್ಪಕವಾಗಿ ನಿರ್ವಹಿಸಿರುವುದರಿಂದ ಕಾರ್ಯಪಾಲಕ ಅಭಿಯಂತರರಿಂದ ಅನುಮೋದನೆ ಪಡೆದು ಅವುಗಳನ್ನು ಪಾವತಿಸಿದ್ದು, ತಮ್ಮ ವಿರುದ್ಧದ ಆರೋಪಗಳನ್ನು ಸಾಬೀತು ಪಡಿಸಬಹುದಾದ ಯಾವುದೇ ಸಾಕ್ಷಿ ಪುರಾವೆಗಳು ಇಲ್ಲದೇ ಇರುವುದರಿಂದ ತಮ್ಮನ್ನು ಆರೋಪಮುಕ್ತರನ್ನಾಗಿಸಬೇಕೆಂದು ಕೋರಿರುತ್ತಾರೆ. ಇವರು ಈಗಾಗಲೇ ದಿ: 30-06-2015 ರಂದು ಸೇವೆಯಿಂದ ನಿವೃತ್ತಿ ಹೊಂದಿರುತ್ತಾರೆ.

7) ಶ್ರೀ. ಆರ್. ನಾಗರಾಜ್, ಹಿಂದಿನ ಸಹಾಯಕ ಕಾರ್ಯಪಾಲಕ ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಸಕಲೇಶಪುರ 2004-05 ನೇ ಸಾಲಿನ ಬರ ಪರಿಹಾರ ಯೋಜನೆಯ ಕಾಮಗಾರಿಗಳನ್ನು ನಿರ್ವಹಿಸಿದ್ದು, ಉಪ ವಿಭಾಗದ ಸಹಾಯಕ ಇಂಜಿನಿಯರ್/ಕಿರಿಯ ಇಂಜಿನಿಯರುಗಳು ನಿರ್ವಹಿಸಿದ ಕಾಮಗಾರಿಗಳಿಗೆ ವಿತರಣೆಯಾದ ಆಹಾರ ಧಾನ್ಯಗಳು ಮತ್ತು ನಗದು ಹಣದ ಬಗ್ಗೆ ಸಮಗ್ರ ಮಾಹಿತಿಯನ್ನು ನಿರ್ವಹಿಸಿರುವುದಾಗಿಯೂ, ಎನ್.ಎಂ.ಆರ್.ಗಳನ್ನು ಉಪ ವಿಭಾಗದಲ್ಲಿ ನಿರ್ವಹಿಸಿರುತ್ತಾರೆಂದು, ಹಾಗಾಗಿ ತಮ್ಮ ವಿರುದ್ಧದ ಆರೋಪವನ್ನು ಕೈಬಿಡಬೇಕೆಂದು ಕೋರಿರುತ್ತಾರೆ. ಸದರಿಯವರು ತಮ್ಮ ಲಿಖಿತ ಹೇಳಿಕೆಯಲ್ಲಿ ಸಮರ್ಪಕವಾಗಿ ತಮ್ಮ ವಿರುದ್ಧದ ಆರೋಪದ ಬಗ್ಗೆ ಉತ್ತರಿಸಿರುವುದಿಲ್ಲ.

ಸರ್ಕಾರವು ಆಪಾದಿತ ಅಧಿಕಾರಿಗಳ ವಿರುದ್ಧದ ಆರೋಪಗಳು ಮತ್ತು ಅವರುಗಳು ಸಲ್ಲಿಸಿರುವ ಲಿಖಿತ ರಕ್ಷಣಾ ಹೇಳಿಕೆಗಳು ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಜಿಲ್ಲಾಪಂಚಾಯತಿ, ಹಾಸನ ಇವರ ಅಭಿಪ್ರಾಯವನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 232 ವಿಸೇಬಿ 2013 ಬೆಂಗಳೂರು ದಿನಾಂಕ: 08-07-2016**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಈ ಕೆಳಕಂಡ ಅಧಿಕಾರಿಗಳಿಗೆ ಕ್ರಮಾಂಕ ಗ್ರಾಅಪ 27 ಇವಿನ್‌ಕ್ಯೂ 2004, ದಿನಾಂಕ: 26-11-2014 ರ ಕರ್ನಾಟಕ ನಾಗರೀಕ ಸೇವಾ (ವನಿಮೇ) 1957ರ ನಿಯಮ 12(1)(ಎ) ರಡಿಯಲ್ಲಿ ಕಾರಣ ಕೇಳುವ ನೋಟೀಸ್ ಜೊತೆ ಜಾರಿ ಮಾಡಿರುವ ಆರೋಪಗಳಿಗೆ ಸಂಬಂಧಿಸಿದಂತೆ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ರ ನಿಯಮ 8(ii) ರಡಿ ಪ್ರದತ್ತವಾದ ಅಧಿಕಾರದನ್ವಯ "ವಾಗ್ದಂಡನೆ" ವಿಧಿಸಿ ಆದೇಶಿಸಿದೆ.

1. ಶ್ರೀ. ರಾಜಗೋಪಾಲ್, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ ತಾ.ಪಂ., ಸಕಲೇಶಪುರ.
2. ಶ್ರೀ. ಹನುಮನರಸಯ್ಯ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ ತಾಪಂ., ಹಾಸನ.
3. ಶ್ರೀ. ಎಸ್. ಸಿ. ಮಹೇಶ್, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ ತಾಪಂ.ಚನ್ನರಾಯಪಟ್ಟಣ.
4. ಶ್ರೀ. ಕೆ. ಬಿ. ಸುಬ್ರಹ್ಮಣ್ಯ ಹಿಂದಿನ ಸಕಾಇಂ., ಸಕಲೇಶಪುರಪಂ. ರಾಜ್.ಇಂ. ಉಪ ವಿಭಾಗ.ಸಕಲೇಶಪುರ.
5. ಶ್ರೀ. ಕೆ. ಆರ್. ಮಲ್ಲೇಶಗೌಡ, ಹಿಂದಿನ ಕೃಷಿ ಅಧಿಕಾರಿ, ಹೊಳೆನರಸೀಪುರ.
6. ಶ್ರೀ. ಹೆಚ್. ಜಿ. ಅಶೋಕಕುಮಾರ್, ಹಿಂದಿನ ಕೃಷಿ ಅಧಿಕಾರಿ, ಆಲೂರು.
7. ಆರ್. ನಾಗರಾಜ್, ಹಿಂದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್.ಪಂಚಾಯತ್ ರಾಜ್ ಇಂಜೀನಿಯರಿಂಗ್,ತಾಂತ್ರಿಕ ವಿಭಾಗ, ಸಕಲೇಶಪುರ.

ಶ್ರೀ. ನಾಗರಾಜ್ ಜಿ. ನಾಯಕ್, ಹಿಂದಿನ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಜಲಸಂಪನ್ಮೂಲ ಇಲಾಖೆ ಇವರಿಗೆ ಕ್ರಮಾಂಕ ಗ್ರಾಅಪ 27 ಇಎನ್‌ಕ್ಯೂ 2004, ದಿನಾಂಕ: 26-11-2014 ರ ಕರ್ನಾಟಕ ನಾಗರೀಕ ಸೇವಾ (ವನಿಮೇ) 1957ರ ನಿಯಮ 12(1)(ಎ) ರಡಿಯಲ್ಲಿ ಕಾರಣ ಕೇಳುವ ನೋಟೀಸ್ ಜೊತೆ ಜಾರಿ ಮಾಡಿರುವ ಆರೋಪಗಳಿಗೆ ಸಂಬಂಧಿಸಿದಂತೆ, ದೋಷಮುಕ್ತಗೊಳಿಸಿ ಆದೇಶಿಸಿದೆ.

ಶ್ರೀ. ನಂಜೇಶಯ್ಯ, ಹಿಂದಿನ ಸಹಾಯಕ ಕಾರ್ಯಪಾಲಕ ಇಂಜೀನಿಯರ್ ಮತ್ತು ಶ್ರೀ. ಕೆ. ಕೃಷ್ಣಪ್ಪ, ಹಿಂದಿನ ಸಹಾಯಕ ಕಾರ್ಯಪಾಲಕ ಇಂಜೀನಿಯರ್ ಇವರುಗಳು ಸೇವೆಯಿಂದ ವಯೋನಿವೃತ್ತಿ ಹೊಂದಿದ್ದು, ಪ್ರಕರಣ ನಡೆದು 11 ವರ್ಷ ಕಳೆದಿರುವುದರಿಂದ ಕರ್ನಾಟಕ ನಾಗರೀಕ ಸೇವಾ (ವನಿಮೇ) 1957ರಡಿ ದಂಡನೆ ವಿಧಿಸಲು ಅವಕಾಶವಿಲ್ಲವೆಂದು ಅವರುಗಳ ವಿರುದ್ಧ ಶಿಸ್ತುಕ್ರಮವನ್ನು ಕೈಬಿಡಲಾಗಿದೆ.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಹಾಸನ ಇವರು ತಮ್ಮ ಪತ್ರ ದಿನಾಂಕ: 17-08-2007 ರಲ್ಲಿ ತಿಳಿಸಿರುವಂತೆ ಶ್ರೀ. ಜಿ. ಟಿ. ವೆಂಕಟೇಶ, ಹಿಂದಿನ ಸಹಾಯಕ ಕಾರ್ಯಪಾಲಕ ಇಂಜೀನಿಯರ್, ಪಂಚಾಯತ್ ರಾಜ್ ಇಂಜೀನಿಯರಿಂಗ್ ಉಪ ವಿಭಾಗ, ಬೇಲೂರು ಹಾಗೂ ಶ್ರೀ. ಬಿ. ಎ. ಶಿವಾನಂದ, ಹಿಂದಿನ ಸಹಾಯಕ ಕಾರ್ಯಪಾಲಕ ಇಂಜೀನಿಯರ್, ಪಂಚಾಯತ್ ರಾಜ್ ಇಂಜೀನಿಯರಿಂಗ್ ಉಪ ವಿಭಾಗ, ಹೊಳೆನರಸೀಪುರ ಇವರುಗಳು ಎನ್.ಎಂ.ಆರ್. ಗಳನ್ನು ಸಮರ್ಪಕವಾಗಿ ನಿರ್ವಹಿಸಿದ್ದು ಅವರ ಕಾರ್ಯದಲ್ಲಿ ನಿಷ್ಕಾಳಜಿ ತೋರಿರುವುದಿಲ್ಲವೆಂಬ ಅಂಶವನ್ನು ಪರಿಗಣಿಸಿ ಅವರುಗಳ ಮೇಲಿನ ಶಿಸ್ತುಕ್ರಮವನ್ನು ಕೈಬಿಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಎಸ್. ರಂಗನಗೌಡ) 8/7/2016
ಸರ್ಕಾರದ ಅಧೀನ ಕಾರ್ಯದರ್ಶಿ (ಸೇವೆಗಳು ಬಿ&ಸಿ),
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಗೆ:

1. ಮಹಾಲೇಖಪಾಲರು, (ಎ&ಇ) ಕರ್ನಾಟಕ, ಬೆಂಗಳೂರು.
2. ಪೋಲಿಸ್ ಮಹಾ ನಿರ್ದೇಶಕರು, ಸಿ.ಓ.ಡಿ., ತರಬೇತಿ, ವಿಶೇಷ ಘಟಕಗಳು, ಆರ್ಥಿಕ ಅಪರಾಧಗಳು, ಬೆಂಗಳೂರು.
3. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ/ಕೃಷಿ ಇಲಾಖೆ/ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ/ಜಲಸಂಪನ್ಮೂಲ ಇಲಾಖೆ, ಬೆಂಗಳೂರು.
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಹಾಸನ.
5. ಸರ್ಕಾರದ ಅಧೀನ ಕಾರ್ಯದರ್ಶಿ–ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ/ಕೃಷಿ ಇಲಾಖೆ/ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ/ಜಲಸಂಪನ್ಮೂಲ ಇಲಾಖೆ, ಬೆಂಗಳೂರು.
6. ಆಪಾದಿತ ಅಧಿಕಾರಿ/ನೌಕರರುಗಳಿಗೆ (ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಹಾಸನ. ಇವರ ಮುಖಾಂತರ)
7. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ ಪ್ರಧಾನ ಕಾರ್ಯದರ್ಶಿ(ಪಂ.ರಾಜ್)/ಜಂಟಿ ಕಾರ್ಯದರ್ಶಿ (ಆಡಳಿತ), ಗ್ರಾ .ಅ. & ಪಂ.ರಾಜ್ ಇಲಾಖೆ, ಇವರ ಆಪ್ತ ಶಾಖೆಗೆ.
8. ವಿಶೇಷಾಧಿಕಾರಿ, ಗಣಕ ಕೋಶ, ಗ್ರಾ.ಅ.ಪಂ.ರಾಜ್ ಇಲಾಖೆ.
9. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.

GO